# ಕಡಿಮೆಯಾಗುತ್ತಿರುವ 'ಫಲ ಪೂಜೆ'

ಬಂಜೆಯೊಬ್ಬಳು ಅಡುಗೆ ಮಾಡಿ ಭಿಕ್ಷುಕನಿಗಾಗಿ ಕಾದು ಕುಳಿತಿದ್ದಳು. ಕಾರಣ ಅವನು ಕರೆಯುವ 'ಅಮ್ಮಾ' ಎಂಬ ಪದ ಕೇಳಲು. ಪ್ರತಿ ಜೀವಿಯು ಕೂಡ ತನ್ನ ಮಗುವಿಗಾಗಿ ಹಂಬಲಿಸುವುದು ಸಹಜ. ಶಾಸ್ತ್ರೀಯ ಸಂಗೀತ ಕೇಳಿದ ಗಿಡ, ಮರ, ಬಳ್ಳಿಗಳು ಹೆಚ್ಚು ಫಲ ನೀಡುತ್ತವೆ ಎಂಬುದನ್ನು ವಿಜ್ಞಾನ ಒಪ್ಪಿಕೊಳ್ಳುತ್ತದೆ. ನಮ್ಮ ಸನಾತನ ಧರ್ಮೀಯರು ಗಿಡ, ಮರ, ಬಳ್ಳಿಗಳಲ್ಲಿ ದೈವತ್ವವನ್ನು ಕಾಣುತ್ತಾರೆ. ಈ ಎಲ್ಲ ಹಿನ್ನೆಲೆಯಲ್ಲಿ ಅನಾದಿ ಕಾಲದಿಂದಲೂ ಇದ್ದ 'ಫಲ ಪೂಜೆ' ಕಡಿಮೆಯಾಗುತ್ತಿರುವುದು ವಿಷಾದದ ಸಂಗತಿ.

ನಾವು ಚಿಕ್ಕವರಿರುವಾಗ ಪ್ರಥಮ ಫಲ ಬಿಟ್ಟ ತೆಂಗಿನ ಮರ, ಅಡಿಕೆ ಮರ ಮುಂತಾದವುಗಳಿಗೆ ನೀರನ್ನು ಅರ್ಪಿಸಿ ಪೂಜೆ ಸಲ್ಲಿಸುತ್ತಿದ್ದರು. ಅದರ ಫಲ ತೆಗೆದ ನಂತರ ಮನೆಯ ದೇವರಿಗೆ, ಗ್ರಾಮ ದೇವತೆಗೆ ಹಾಗೂ ಕುಲಪುರೋಹಿತರಾದ ಸಿದ್ದೇಶ್ವರದ ವೆಂಕಟರಮಣ ಭಟ್ಟರಿಗೆ ಅರ್ಪಿಸುವುದು ರೂಢಿಯಲ್ಲಿತ್ತು. ತೋಟದಲ್ಲಿ ಮೊದಲ ಬಾರಿಗೆ ಫಲ ಕಂಡಾಗ ಅದಕ್ಕೆ ಪ್ರಥಮವಾಗಿ ತಾಮ್ರದ ತಂಬಿಗೆಯಿಂದ ನೀರನ್ನು ಅರ್ಪಿಸಿ, ನಂತರ ಮನೆಯ ಪುರೋಹಿತರನ್ನು ಕರೆದು ಐದು ಜಾತಿಯ ಹೂಗಳಿಂದ, ಐದು ಜಾತಿಯ ಫಲಗಳಿಂದ ಅಲಂಕರಿಸಿ ಮುಹೂರ್ತ ನೋಡಿಯೇ ಪೂಜೆ ಸಲ್ಲಿಸುತ್ತಿದ್ದರು. ಅಂದು ಕೃಷಿಯೇ ಒಂದು ವ್ರತವಾಗಿತ್ತು. ಇಂದು ಕೃಷಿಯೂ ಕೂಡಾ ಯಾಂತ್ರಿಕೃತವಾಗಿ, ಉದ್ಯಮವಾಗಿಯೇ ಬೆಳೆಯುತ್ತಿರುವ ಈ ಸನ್ನಿವೇಶದಲ್ಲಿ 'ಫಲ ಪೂಜೆ' ಮರೆಯಾಗುತ್ತಿರುವುದರಲ್ಲಿ ಆಶ್ಚರ್ಯವಿಲ್ಲ.

–ಬೀರಣ್ಣ ನಾಯಕ ಮೊಗಟಾ





# ಮಳೆಯಿಂದ ಪತ್ರಿಕೆ ರಕ್ಷಿಸಲು ಓದುಗರ ಉಪಾಯ

ಮಳೆ ಇರಲಿ ಚಳಿ ಇರಲಿ, ಹಲವರಿಗೆ ಮುಂಜಾನೆ ಆರಂಭ ಆಗುವುದೇ ಅಂದಿನ ವರ್ತಮಾನ ಪತ್ರಿಕೆ ಓದುವ ಮೂಲಕ. ನಿಯತಕಾಲಿಕೆಗಳೂ ಇರಲೇಬೇಕು. ಕರಾವಳಿ ಭಾಗದಲ್ಲಿ ಮಳೆ ಜಾಸ್ತಿ. ಇಂಥ ಸಂದರ್ಭದಲ್ಲಿ ಬೆಳಗ್ಗೆ ಪೇಪರ್ ತಂದು ಹಾಕುವವರಿಗೆ ಮಳೆಯಿಂದ ಒದ್ದೆ ಆಗದಂತೆ ಪೇಪರ್ ಹಾಕುವುದೇ ಸಮಸ್ಯೆ. ಇನ್ನು ಪತ್ರಿಕೆ ಒದ್ದೆಯಾಗಿದ್ದರೆ ಓದುಗರಿಗೂ ಓದಲು ಕಿರಿಕಿರಿ.

ಇದಕ್ಕಾಗಿ ಈ ಭಾಗದ ಮನೆಮಂದಿಯು ತಮ್ಮ ಮನೆಗಳ ಮುಂದೆ ಕಡ್ಡಿಯೊಂದಕ್ಕೆ ಪೈಪ್‌ಗಳನ್ನು ಅಳವಡಿಸಿದ್ದಾರೆ. ಪತ್ರಿಕೆ ವಿತರಕರು ಈ ಪೈಪ್‌ನ ಒಳಗೆ ಪತ್ರಿಕೆಯನ್ನು ಹಾಕಿ ಹೋಗುತ್ತಾರೆ. ಇದರಿಂದ ಪತ್ರಿಕೆ ಒದ್ದೆಯಾಗುವುದು ತಪ್ಪುತ್ತದೆ. ಯಾವುದೇ ಕಿರಿಕಿರಿ ಇಲ್ಲದೆ ಪತ್ರಿಕೆಯನ್ನು ಓದಬಹುದು.

–ಅರುಣ್ ಕಿಲ್ಲೂರು

# ದೈತ್ಯಾಕಾರದ ಕಪ್ಪು ಕಂಬಳಿಹುಳ

ಮಳೆಗಾಲ, ಕೊಂಚ ಥಂಡಿಯಾದ ವಾತಾವರಣ ಶುರುವಾಗುತ್ತಿದ್ದಂತೆ ಕಂಬಳಿಹುಳಗಳು ಎಲ್ಲೆಂದರಲ್ಲಿ ಪ್ರತ್ಯಕ್ಷಗೊಳ್ಳುತ್ತವೆ. ಕಂಬಳಿಹುಳಗಳು ಮೈಗೆ ತಗುಲಿದರೆ ತುರಿಕೆ, ಉರಿ ಮತ್ತು ಕೆಲವರಿಗೆ ವಾಂತಿಯ ಸಮಸ್ಯೆ ಉಂಟಾಗುತ್ತದೆ. ಕೆಲವು ಜಾತಿಯ ಕಂಬಳಿಹುಳಗಳು ಚಿಟ್ಟೆಗಳಾಗಿ ಬದಲಾಗಿ ಪರಾಗಸ್ಪರ್ಶಕ್ಕೆ ನೆರವಾಗುತ್ತವೆ. ಹೀಗಾಗಿ ಇವು ಪರಿಸರ ಸಮತೋಲನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಕೆಲವು ಕಂಬಳಿಹುಳಗಳು ಅತಿಯಾಗಿ ಹಸುರೆಲೆಗಳನ್ನು ತಿಂದು ತಮ್ಮ ಗಾತ್ರವನ್ನು ಹೆಚ್ಚಿಸಿಕೊಳ್ಳುತ್ತವೆ. ಎಲೆಗಳನ್ನೆಲ್ಲ ತಿಂದು ಮುಗಿಸಿ ಗಿಡಗಳನ್ನು ಒಣಗಿಸಿ ರೈತರಿಗೆ ಸಂಕಟವನ್ನೂ ತಂದೊಡ್ಡುವ ಸಂದರ್ಭಗಳು ಇವೆ. ನಿರಂತರ ಮಳೆ ಸುರಿದಾಗ ಹಳ್ಳಿಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಬಳಿಹುಳುಗಳು ಹುಟ್ಟಿ ಮನೆಗಳ ಒಳಗೂ ಪ್ರವೇಶಿಸಿ ಕಿರಿಕಿರಿ ಉಂಟು ಮಾಡುತ್ತವೆ.

ಇಷ್ಟು ವರ್ಷ ಚಿಕ್ಕ ಚಿಕ್ಕ ಕಂಬಳಿಹುಳುಗಳು ಕಾಣಸಿಗುವುದು ಸಾಮಾನ್ಯವಾಗಿತ್ತು. ಆದರೆ ಮನೆಯ ಅಂಗಳದಲ್ಲಿ ದೈತ್ಯ ಕಂಬಳಿಹುಳು ಕಾಣಿಸಿಕೊಂಡು ಅಚ್ಚರಿ ನೀಡಿತು. ಇದು ವೋಲಿ ವಾರ್ಮ್ (Wolley Worm) ಅಥವಾ ವೋಲಿ ಬಿಯರ್ ಕ್ಯಾಟರ್‌ಪಿಲ್ಲರ್ (Wolley Bear Caterpillar). ಇದರ ವೈಜ್ಞಾನಿಕ ಹೆಸರು ಪಿರ್‌ಹಾರ್ಕ್‌ಟಿಯಾ ಇಸಾಬೆಲ್ಲ (Pyrrharctia Isabella). ಪ್ರತಿ ವರ್ಷ ಅಮೆರಿಕದ ಉತ್ತರ ಕೆರೊಲಿನಾ ರಾಜ್ಯದಲ್ಲಿ 1978ರಿಂದ ವೋಲಿ ವಾರ್ಮ್ ಫೆಸ್ಟಿವಲ್ ಆಚರಿಸಲಾಗುತ್ತದೆ. ಹವಾಮಾನದ ಬದಲಾವಣೆಯ ಮುನ್ಸೂಚನೆಯನ್ನು ಕಂಬಳಿಹುಳುಗಳಲ್ಲಿ ಬದಲಾಗುವ ಭಿನ್ನವರ್ಣಗಳ ಅಧ್ಯಯನಗಳಿಂದ ಪಡೆಯುತ್ತಾರೆಂದು ತಿಳಿದುಬಂದಿದೆ.

–ಶಾಂತಲಾ ರಾಜಗೋಪಾಲ್

